International Journal of Kannada Research
www.kannadajournal.com

ISSN: 2454–5813
IJKR 2019; 5(1): 167-170
© 2019 IJKR
www.kannadajournal.com
Received: 18-11-2018
Accepted: 21-12-2018

**ಡಾ. ಎಸ್.ಕೆ.ದೇವೆಗೌಡ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು, ಕರ್ನಾಟಕ, ಭಾರತ

**Correspondence**
**ಡಾ. ಎಸ್.ಕೆ.ದೇವೆಗೌಡ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು, ಕರ್ನಾಟಕ, ಭಾರತ

# ಹಳೆಬೀಡು ಪ್ರದೇಶದ ಗುಡ್ಲೇಶ್ವರ ದೇವಾಲಯ ಕುರಿತ ಒಂದು ಸ್ಥೂಲ ಅವಲೋಕನ

**ಡಾ. ಎಸ್.ಕೆ.ದೇವೆಗೌಡ**

**DOI:** https://doi.org/10.22271/24545813.2019.v5.i1c.853

**ಪೀಠಿಕೆ**

ಹಳೆಬೀಡು ಒಂದೊಮ್ಮೆ ಹೊಯ್ಸಳರ ವಂಶದ ರಾಜಧಾನಿಯಾಗಿತ್ತು. ಇದೇ ಹೊಯ್ಸಳರು ಹತ್ತನೆಯ ಶತಮಾನದ ಆರಂಭದಿಂದ ಹದಿಮೂರನೆಯ ಶತಮಾನದ ಅಂತ್ಯದವರೆವಿಗೂ ಈ ಪ್ರದೇಶವನ್ನು ಆಳಿರುತ್ತಾರೆ. ಮೂಲತಃ ಹೊಯ್ಸಳರು ಕಲ್ಯಾಣದ ಚಾಲುಕ್ಯರಿಗೆ ಸಾಮಂತರಾಗಿದ್ದುಕೊಂಡೇ ಅಧಿಕಾರವನ್ನು ನಡೆಸಿದವರು ಎಂಬುದು ಕೂಡ ತಿಳಿದುಬರುತ್ತದೆ. ಆದರೆ, 12ನೆಯ ಶತಮಾನದ ಆರಂಭದಲ್ಲಿ ರಾಜ ವಿಷ್ಣುವರ್ಧನ ಮತ್ತು ವೀರಬಲ್ಲಾಳನ ಆಡಳಿತದ ಕಾಲದಲ್ಲಿ ಚಾಲುಕ್ಯರು ಅವನತಿಯನ್ನು ಕಂಡಾಗ ಇವರು ಹೆಚ್ಚು ಸ್ವತಂತ್ರವಾಗಿ ಆಡಳಿತವನ್ನು ನಡೆಸುತ್ತಾರೆ. ಹೊಯ್ಸಳರ ಮೂಲ ಊರು ಇಂದಿನ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿರುವ ಅಂಗಡಿ ಎಂಬ ಪುಟ್ಟ ಗ್ರಾಮವಿದೆ. ಆಗಿಂದಾಗ್ಗೆ ಉಂಟಾಗುತ್ತಿದ್ದ ನೆರೆಯ ಶತ್ರುಗಳ ಕಿರುಕುಳದ ನಡುವೆಯೂ ಇವರು ತಮ್ಮ ರಾಜಕೀಯ ಕಾರ್ಯಕ್ಷೇತ್ರವನ್ನು ಇಂದಿನ ಹಾಸನ ಜಿಲ್ಲೆ ಯ ಮಧ್ಯಭಾಗದಲ್ಲೇ ಸ್ಥಿರಗೊಳಿಸಿಕೊಂಡು ರಾಜ್ಯಭಾರ ನಡೆಸುತ್ತಾರೆ. ಇಂದಿನ ಹಳೇಬೀಡು ಹೊಯ್ಸಳರ ಬಹುಕಾಲದ ರಾಜಧಾನಿಯಾಗಿ ಮೆರೆದಿದ್ದ ಊರು. ಹೊಯ್ಸಳರಿಗಿಂತ ಮುಂಚಿನಿಂದಲೂ ಅಸ್ತಿತ್ವದಲ್ಲಿ ಇದ್ದ ಊರಾದ್ದರಿಂದ ಜನಪದವಾಗಿ ಹಳೆಯ ಬೀಡು(ಊರು), ಹಳೇಬೀಡು ಎಂಬ ರೂಪಾಂತರಗಳನ್ನು ಕಂಡಿದೆ.

ಸರಿಸುಮಾರು ಒಂಬತ್ತನೆಯ ಶತಮಾನದಲ್ಲಿ ರಾಷ್ಟ್ರಕೂಟರ ದೊರೆ ದೋರ ಎಂಬುವವನು ಈ ಊರಿನಲ್ಲಿ ದೊಡ್ಡಕೆರೆಯೊಂದನ್ನು ಕಟ್ಟಿಸಿದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಇಲ್ಲಿನ ಕೆರೆಯು 1200 ಎಕರೆಗೂ ಮೀರಿ ವ್ಯಾಪ್ತಿಯನ್ನು ಹೊಂದಿದ್ದು, ಈಗಲೂ ಕೆರೆಯು ನೀರಿನಿಂದ ತುಂಬಿಕೊಂಡಾಗ ಸಮುದ್ರದಂತೆ ತೋರುತ್ತದೆ. ಈ ಕಾರಣದಿಂದಾಗಿಯೇ ಈ ಕೆರೆಯನ್ನು ದೋರಸಮುದ್ರ ಎಂದು ಉಲ್ಲೇಖಿಸಲಾಗಿದೆಯೆಂದು ತಿಳಿದುಬರುತ್ತದೆ. ಅಂದಿನ ಕಾಲಕ್ಕೆ ದೋರಸಮುದ್ರ ಎನ್ನುವ ಹೆಸರೇ ಊರಿಗೂ ಇತ್ತೆಂದು ಹೊಯ್ಸಳರ ಕಾಲದ ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಹದಿನೆಂಟನೆಯ ಶತಮಾನದ ಆಸು–ಪಾಸಿನಲ್ಲಿ ದ್ವಾರಾವತಿ–ದ್ವಾರಸಮುದ್ರ ಎನ್ನುವ ಹೆಸರಿನ ಬಳಕೆಯೂ ಇತ್ತೆಂದು ಜನಪದದಿಂದ ತಿಳಿದುಬರುತ್ತದೆ. ದೋರಸಮುದ್ರ ಕೆರೆಯೇ ಅಂದಿನ ಕಾಲಕ್ಕೆ ಇಡೀ ರಾಜಧಾನಿಯ ಮತ್ತು ಸುತ್ತಲಿನ ಪ್ರದೇಶಗಳ ಮುಖ್ಯ ನೀರಾವರಿ ಸೌಲಭ್ಯವಾಗಿತ್ತು. ಇಂದಿನ ಬೇಲೂರು ಪಟ್ಟಣದ ಮೂಲಕ ಹರಿಯುವ ಯಗಚಿ ನದಿ ಅಥವಾ ಸೋಮವತೀ ಎನ್ನುವ ನದಿಯು ಈ ಕೆರೆಗೆ ನೀರುಣಿಸುವ ಮುಖ್ಯ ಮೂಲವಾಗಿತ್ತು. ಹನ್ನೆರಡನೆಯ ಶತಮಾನದಲ್ಲೇ ನದಿಯ ಪಾತ್ರದಿಂದ ದೊಡ್ಡ ಕಾಲುವೆಗಳನ್ನು ನಿರ್ಮಿಸಿರುವ ಕುರುಹುಗಳನ್ನು ಇಂದೂ ಕಾಣಬಹುದು. ಕೆಲವು ಕಾಲುವೆಗಳು ಇಂದಿಗೂ ದೊಡ್ಡಕೆರೆಗೆ ನೀರುಣಿಸುತ್ತಿವೆ.

ರಾಜ ವಿಷ್ಣುವರ್ಧನನ ಕಾಲವನ್ನು ಹೊರತುಪಡಿಸಿ ಮಿಕ್ಕ ಎಂಟು ರಾಜರ ಕಾಲದಲ್ಲೂ ಇಂದಿನ ಹಳೇಬೀಡು ಪಟ್ಟಣವೇ ರಾಜಧಾನಿಯಾಗಿತ್ತೆಂದು ಸಂಶೋಧನೆಗಳಿಂದ ತಿಳಿದುಬಂದಿರುತ್ತದೆ. ಹೊಯ್ಸಳರಲ್ಲಿ ಒಂಬತ್ತು ಮಂದಿ ರಾಜರುಗಳು ಆಗಿಹೋಗಿದ್ದರೂ ವೀರಬಲ್ಲಾಳ, ವಿಷ್ಣುವರ್ಧನ ಮತ್ತು ನರಸಿಂಹ ಬಲ್ಲಾಳರು ಮಾತ್ರ ಹೆಚ್ಚು ಸಾಮರ್ಥ್ಯವುಳ್ಳರಾಗಿದ್ದರೆಂದು ಇತಿಹಾಸವು ಹೇಳುತ್ತದೆ. ಅಂದಿನ

ಈ ನಗರದಲ್ಲಿ ಸುಮಾರು ಒಂದು ಲಕ್ಷ ಮಂದಿ ವಾಸಿಸುತ್ತಿದ್ದು, ನಗರದ ರಕ್ಷಣೆಗಾಗಿ ಹೊರವಲಯದಲ್ಲಿ ಸುತ್ತಲೂ ದೊಡ್ಡ ಕಲ್ಲುಗಳಿಂದ ಎರಡು ಸುತ್ತಿನ ಕೋಟೆಯನ್ನು ನಿರ್ಮಿಲಾಗಿತ್ತು. ಕೋಟೆಯ ಕುರುಹುಗಳನ್ನು ಇಂದೂ ಕಾಣಬಹುದು. ಊರಿನ ಪ್ರವೇಶಕ್ಕೆ ಒಟ್ಟು ಐದು ಹೆಬ್ಬಾಗಿಲುಗಳಿದ್ದುದು ಕೋಟೆಯ ರಚನೆಯಲ್ಲಿ ಕಂಡುಬರುತ್ತದೆ. ಹಳೇಬೀಡಿನ ಐತಿಹಾಸಿಕ ನಾಗರಿಕತೆಯು ಇಂದಿಗಿಂತಲೂ ಉತ್ತಮವಾಗಿಯೇ ಇದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಅಂದು ಹೆಚ್ಚಿನವರು ಕೃಷಿಕರಾಗಿದ್ದು ವಸ್ತುವಿನಿಮಯ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿರುತ್ತಾರೆ. ಹೊಯ್ಸಳರ ರಾಜಕೀಯ ಮತ್ತು ಆರ್ಥಿಕ ಕೇಂದ್ರ ಸ್ಥಾನವಾಗಿದ್ದ ಈ ಊರು ಇಂದಿನ ಯಾವ ರಾಜಯಾಗಿಧಾನಿಗೂ ಕಡಿಮೆ ಇರಲಿಲ್ಲವೆಂದು ಅಂದುಕೊಳ್ಳಬಹುದು. ಊರಿನ ರಾಜಬೀದಿಗಳಲ್ಲಿ ನ್ಯಾಯವಾದಿಗಳು, ಆರ್ಥಿಕ ಪರಿಣತರು, ದೊಡ್ಡ ವ್ಯಾಪಾರಸ್ಥರು, ವಿದ್ವಾಂಸರು ಮತ್ತು ಧಾರ್ಮಿಕ ಮುಖಂಡರು ವಾಸಿಸುತ್ತಿದ್ದರೆಂದು ಶಾಸನಗಳು ಹೇಳುತ್ತವೆ. ಕಲಾವಿದರು, ಸೇವಕರು ಮತ್ತು ಇತರೆ ಎಲ್ಲಾ ವರ್ಗದ ಜನರಿಗೂ ಉತ್ತಮ ಸೌಲಭ್ಯಗಳುಳ್ಳ ಕೇರಿಗಳೂ ಮರ್ಯಾದೆಗಳೂ ದೊರೆಯುತ್ತಿದ್ದವು. ವಿಶೇಷವಾಗಿ ಕಲಾವಿದರಿಗೆಂದೇ ಪ್ರತ್ಯೇಕವಾದ ವಿಹಾರಧಾಮಗಳೂ ಮತ್ತು ವಿದ್ಯಾಲಯಗಳೂ ಇದ್ದವೆಂದು ಇಲ್ಲಿನ ಪ್ರಾಚೀನ ಕುರುಹುಗಳಿಂದ ತಿಳಿದುಬರುತ್ತದೆ. ಕುಂಬಾರರು, ಹಾಲುಮತದವರು ಮತ್ತು ವೈದಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಎಲ್ಲರೂ ತಮ್ಮ ವೃತ್ತಿಯ ಜೊತೆಗೆ ಬಹುವಾಗಿ ಕೃಷಿಯನ್ನೇ ನಂಬಿಕೊಂಡಿದ್ದರು. ಆದರೆ, ಇಂದು ಆ ವೈಭವದ ದಿನಗಳ ಕುರುಹುಗಳು ಅತ್ಯಲ್ಪ ಎನ್ನುವಷ್ಟು ಉಳಿದಿದೆ. ಪದೇಪದೆ ಪರಕೀಯರ ಆಕ್ರಮಣಕ್ಕೆ ತುತ್ತಾಗಿದ್ದೂ ಅಲ್ಲದೆ ಬಹುವರುಷಗಳ ಕಾಲ ಕಾಲಗರ್ಭದಲ್ಲಿ ಕಳೆದುಹೋಗಿದ್ದೂ ಸಹ ಹಳೇಬೀಡಿನ ನಾಗರಿಕತೆಯ ಕುರುಹುಗಳು ಕಡಿಮೆಯಾಗಲು ಕಾರಣ ಎನ್ನಬಹುದು.

ಹೊಯ್ಸಳರ ಕಾಲದಲ್ಲಿ ಈ ಪ್ರಾಂತ್ಯವು ದಟ್ಟವಾದ ಮಲೆನಾಡಾಗಿದ್ದು ಕಾಡಿನ ಉತ್ಪನ್ನಗಳು ಹೆಚ್ಚಾಗಿ ಬಳಕೆಯಲ್ಲಿತ್ತು. ಅಡಿಕೆ, ತೆಂಗು, ಬಾಳೆ, ಕಾಳುಮೆಣ ಇಸು ಮತ್ತು ಹುರುಳಿ, ರಾಗಿ ಮುಂತಾದ ಧಾನ್ಯಗಳನ್ನೂ ಬೆಳೆಯುತ್ತಿದ್ದರು. ಕೃಷಿ ಉತ್ಪನ್ನಗಳು ಸ್ಥಳೀಯವಾಗಿಯೇ ವಿನಿಮಯ ಮಾಡಿಕೊಳ್ಳುತ್ತಿದ್ದುದರಿಂದ ಹಣಕ್ಕೆ ಹೆಚ್ಚಿನ ಆದ್ಯತೆ ದೊರೆತಿರಲಿಲ್ಲ. ಬಂಗಾರ ಮುಂತಾದ ಬೆಲೆಬಾಳುವ ವಸ್ತುಗಳ ಬಳಕೆಯೂ ಕಡಿಮೆಯೇ ಇದ್ದೀತೆಂದು ಹೇಳಬಹುದು. ಆದರೆ, ಒಡವೆಗಳ ರಚನಾ ಚಾತುರ್ಯ ಮತ್ತು ತಾಂತ್ರಿಕತೆಯು ಉನ್ನತಮಟ್ಟದಾಗಿತ್ತೆಂಬುದು ಹೊಯ್ಸಳರ ಶಿಲ್ಪಕಲೆಯಿಂದಲೇ ತಿಳಿದುಬರುತ್ತದೆ. ಹೊಯ್ಸಳರ ಕಾಲದ ನಾಣ್ಯಗಳು ಹೆಚ್ಚು ದೊರೆತಿಲ್ಲವಾದರೂ ಸಿಕ್ಕಿರುವ ಕೆಲವಷ್ಟನ್ನು ಇಲ್ಲಿಯ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಿಡಲಾಗಿದೆ. ಇಂದು ಈ ಪ್ರಾಂತ್ಯವು ಅರೆಮಲೆನಾಡು ಪ್ರದೇಶಕ್ಕೆ ಸೇರಿದ್ದು, ಎಲ್ಲ ಬಗೆಯ ತರಕಾರಿಗಳನ್ನು ಹೆಚ್ಚು ಬೆಳೆಯುತ್ತಾರೆ. ಸೂರ್ಯಕಾಂತಿ. ರಾಗಿ, ಹತ್ತಿ, ಮುಸುಕಿನ ಜೋಳ, ತೆಂಗು, ಬಾಳೆ ಇಲ್ಲಿಯ ಪ್ರಮುಖ ಉತ್ಪನ್ನಗಳಾಗಿದ್ದು, ಅವರೆಕಾಯಿ, ಆಲೂಗೆಡ್ಡೆ ಮತ್ತು ಸೌತೆಕಾಯಿ ಋತುಮಾನದ ವಿಶೇಷ ಬೆಳೆಯಾಗಿದೆ. ಈ ಪ್ರಾಂತ್ಯದ ಅವರೆಕಾಯಿಗೆ ವಿಶೇಷ ರುಚಿಯ ಕಾರಣ ಹೆಚ್ಚು ಬೇಡಿಕೆ ಇದೆ. ಕಬ್ಬು ಮತ್ತು ಹತ್ತಿ ಇಲ್ಲಿಯ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದರೂ ಆ ಜಾಗವನ್ನು ಇಂದು ಶುಂಠಿ ಮತ್ತು ಅರಿಸಿನ ಬೆಳೆಗಳು ಆವರಿಸಿಕೊಂಡಿದೆ. ಅಡಿಕೆ, ಏಲಕ್ಕಿ ಮತ್ತು ಮೆಣಸನ್ನೂ ಸಹ ಸಾಮಾನ್ಯ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ.

ಬೆಳವಾಡಿ ದೇವಾಲಯವು ನಾಡಿನ ವಾಸ್ತುಶಿಲ್ಪ ಕಲೆಯನ್ನು ಶ್ರೀಮಂತಗೊಳಿಸುವಲ್ಲಿ ಹೊಯ್ಸಳರ ಕೊಡಗೆ ಅಪಾರ. ಬೇಲೂರು, ಹಳೆಬೀಡಿನಲ್ಲಿ ಅದ್ಭುತ ದೇವಾಲಯ ನಿರ್ಮಾಣಕ್ಕೂ ಮುನ್ನ ಅವರು ನಿರ್ಮಾಣ ಮಾಡಿದ ದೇವಸ್ಥಾನ ಬೆಳವಾಡಿಯ ವೀರ ನಾರಾಯಣ ಸ್ವಾಮಿ ದೇವಾಲಯ. ಜಿಲ್ಲೆಯ ಬೆಳವಾಡಿಯಲ್ಲಿರುವ ವೀರ ನಾರಾಯಣ ದೇವಾಲಯ. ಹೊಯ್ಸಳರ ವಾಸ್ತು ಶಿಲ್ಪದಲ್ಲಿ ವಿಭಿನ್ನ ಮತ್ತು ಆಕರ್ಷಕವೇ ಆಗಿದೆ. ವಿಭಿನ್ನ ಶೈಲಿಯ ಕೆತ್ತನೆಯನ್ನು ಹೊಂದಿರುವ ಈ ದೇವಾಲಯ ವಿಮಾನ ಗೋಪುರವನ್ನು ಹೊಂದಿದೆ. ದೇವಾಲಯದ ಮಧ್ಯಭಾಗದಲ್ಲಿ ವೀರನಾರಾಯಣ, ಎಡಭಾಗದಲ್ಲಿನ ವೇಣುಗೋಪಾಲಸ್ವಾಮಿ, ಬಲ ಭಾಗದ ಯೋಗನರಸಿಂಹ ಸ್ವಾಮಿ ಮೂರ್ತಿಯನ್ನು ಇಲ್ಲಿ ಕಾಣಬಹುದಾಗಿದೆ. ತ್ರಿಕೂಟಾಚಲ ದೇವಾಲಯ ಎಂದು ಕರೆಯುವ ಈ ದೇವಾಲಯದ ಮತ್ತೊಂದು ವಿಶೇಷ ಎಂದರೆ ಪ್ರತಿ ಮಾರ್ಚ್ 23ರಂದು ಸಪ್ತ ಬಾಗಿಲನ್ನು ದಾಟಿ ಸೂರ್ಯನ ಬೆಳಕು ನಾರಾಯಣದ ಸ್ಪರ್ಶ ಮಾಡುತ್ತದೆ. ಇಂತಹ ವಿಶೇಷ, ವಿಶಿಷ್ಟ ಗುಣಗಳನ್ನು ಹೊಂದಿರುವ ಈ ದೇವಾಲಯ ಈಗ ಕಾಯಕಲ್ಪದ ನಿರೀಕ್ಷೆಯಲ್ಲಿದೆ. ಯಾವುದೇ ಮೂಲಸೌಲಭ್ಯಗಳನ್ನು ಹೊಂದಿರುವ ಕಾರಣ ಈ ಅದ್ಭುತ ವಾಸ್ತುಶಿಲ್ಪಕಲೆಯನ್ನು ಹೊಂದಿರುವ ದೇವಾಲಯ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಇನ್ನು ಇದರ ಇತಿಹಾಸ ಅರಿತು ದೇವಾಲಯ ವೀಕ್ಷಣೆಗೆಂದು ಇಲ್ಲಿಗೆ ಪ್ರವಾಸಿಗರು ನೋಡಲು ಬಂದರೂ ಯಾವುದೇ ಸೌಲಭ್ಯವಿಲ್ಲದೇ ಅವರು ಪರದಾಡುವ ಸ್ಥಿತಿ ಹೊಂದಿದೆ. ಪುರತಾತ್ವ ಇಲಾಖೆ ಅಡಿಯಲ್ಲಿ ಬರುವ ಈ ದೇವಾಲಯಕ್ಕೆ ಸೂಕ್ತ ಸೌಲಭ್ಯ ಕಲ್ಪಿಸುವ ಮೂಲಕ ನಮ್ಮ ಐತಿಹಾಸಿಕ ಕುರುಹಗಳ ಸಂರಕ್ಷಣೆ ಮಾಡುವುದು ಕೂಡ ಅವಶ್ಯಕವಾಗಿದೆ. ಅಲ್ಲದೇ ಈ ಕ್ಷೇತ್ರವನ್ನು ಅಭಿವೃದ್ಧಿ ಮಾಡಿದ್ದಲ್ಲಿ ಇದು ಪ್ರವಾಸೋದ್ಯಮಕ್ಕೂ ಲಾಭಾ ತಂದುಕೊಂಡಲಿದೆ.

ಹಳೇಬೀಡು ಕರ್ನಾಟಕದ ಯುನೆಸ್ಕೊ ವಿಶ್ವ ಪರಂಪರೆಯ ತಾಣವಾಗಿದೆ. ಹೊಯ್ಸಳೇಶ್ವರ ದೇವಸ್ಥಾನವು ಒಂದು ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಳೇಬೀಡು ಪಟ್ಟಣದಲ್ಲಿರುವ ಶಿವನಿಗೆ ಅರ್ಪಿತವಾದ ಐತಿಹಾಸಿಕ ದೇವಾಲಯವಾಗಿದೆ. ಹಳೇಬೀಡು ಹೊಯ್ಸಳೇಶ್ವರ ದೇವಸ್ಥಾನವನ್ನು ಮುಖ್ಯ ವಾಸ್ತುಶಿಲ್ಪಿ ಕೇತಮಲಾ 12ನೇ ಶತಮಾನದಲ್ಲಿ ಹೊಯ್ಸಳ ರಾಜ ವಿಷ್ಣುವರ್ಧನ್ ಅವರ ಆದೇಶದ ಮೇರೆಗೆ ನಿರ್ಮಿಸಿದರು ಹೊಯ್ಸಳೇಶ್ವರ ದೇವಸ್ಥಾನವನ್ನು ದ್ವಾರಸಮುದ್ರ ಎಂಬ ಮಾನವ ನಿರ್ಮಿತ ಸರೋವರದ ತೀರದಲ್ಲಿ ನಿರ್ಮಿಸಲಾಗಿದೆ.ದೆಹಲಿ ಸುಲ್ತಾನರ ಸೈನ್ಯದ ದಾಳಿಯಿಂದ ಹೊಯ್ಸಳೇಶ್ವರ ದೇವಸ್ಥಾನಕ್ಕೆ ಹನಿಯಾಯಿತು.

ಹೊಯ್ಸಳೇಶ್ವರ ದೇವಸ್ಥಾನ, ಕೇದಾರೇಶ್ವರ ದೇವಾಲಯ, ಹುಲಿಕೆರೆ ಕಲ್ಯಾಣಿ(ಕೊಳ), ಜೈನ ಬಸದಿಗಳು, ನಗರೇಶ್ವರ ದೇವಾಲಯ ಸಂಕೀರ್ಣ, ಮಲ್ಲಿಕಾರ್ಜುನ ದೇವಾಲಯ, ದೋರಸಮುದ್ರ ಕೆರೆ, ಹುಲಿಕೆರೆ ಕಲ್ಯಾಣಿ.

ಹಳೆಬೀಡು ಬೇಲೂರು ತಾಲೂಕಿಗೆ ಸೇರಿರುವ ಒಂದು ಗ್ರಾಮ ಹಾಗೂ ಹೋಬಳಿಯ ಕೇಂದ್ರವಾಗಿದೆ. ಬೇಲೂರಿನಿಂದ ಈಶಾನ್ಯಕ್ಕೆ ಸುಮಾರು 30 ಕಿ.ಮೀ.ದೂರದಲ್ಲಿ ಹಳೆಬೀಡಿನ ಹೊಯ್ಸಳೇಶ್ವರ ದೇವಾಲಯದ ಉತ್ತರಕ್ಕೆ 2 ಕಿ.ಮೀ.ದೂರದಲ್ಲಿ ಊರಿನ ಹೊರವಲಯದಲ್ಲಿ ಮುತ್ತಿನ ವೀರಭದ್ರ ಮತ್ತು ಗುಡ್ಲೇಶ್ವರ ದೇವಾಲಯಗಳು ಕಂಡುಬರುತ್ತವೆ. ಗುಡ್ಲೇಶ್ವರ ದೇವಾಲಯವು ಒಂದು ಏಕಕೂಟ ದೇವಾಲಯವಾಗಿದ್ದು ಪೂರ್ವಾಭಿಮುಖವಾಗಿ ನಿರ್ಮಿಸಿಲಾಗಿದ್ದು ಬೆಣಚುಕಲ್ಲಿನಿಂದ ನಿರ್ಮಿಸಲ್ಪಟ್ಟಿದೆ. ಇಲ್ಲಿ ಗರ್ಭಗೃಹ, ಸುಖನಾಸಿ, ನವರಂಗ, ಮುಖಮಂಟಪಗಳು ಕಾಣಬರುತ್ತವೆ. ಆದರೆ ದೇವಾಲಯದ ಬಗ್ಗೆ ಎಪಿಗ್ರಾಫಿಯ ಕರ್ನಾಟಿಕದಲ್ಲಿ ಉಲ್ಲೇಖಗೊಂಡಿಲ್ಲ. ಬಹುಶಃ ಹೊಯ್ಸಳರ ಕಾಲದಲ್ಲಿ ಈ ದೇವಾಲಯವು ನಿರ್ಮಾಣವಾಗಿರಬಹುದು.

**ಗರ್ಭಗೃಹ:** ಗರ್ಭಗೃಹವು ಸುಮಾರು 10x10 ಅಡಿ ಉದ್ದಗಲವನ್ನು ಹೊಂದಿದ್ದು ಚೌಕಾಕಾರವಾಗಿದೆ. ಗರ್ಭಗೃಹದ ಮಧ್ಯದಲ್ಲಿ ನಕ್ಷತ್ರಾಕಾರವಾಗಿ ಸುಮಾರು ಮೂರು ಅಡಿ ಎತ್ತರವಿರುವ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಮೇಲ್ಛಾವಣಿಯಲ್ಲಿ ಚೌಕಾಕಾರವಾದ ಭುವನೇಶ್ವರಿಯಲ್ಲಿ ಅರಳಿದ ಕಮಲವನ್ನು ಬಿಡಿಸಲಾಗಿದೆ. ಗೋಡೆಯ ನಾಲ್ಕು ಮೂಲೆಯಲ್ಲಿ ನಕ್ಷತ್ರಾಕಾರದ ಕಂಬಗಳಿವೆ. ಗರ್ಭಗೃಹದ ಬಾಗಿಲು ಪಟ್ಟಿಕೆಗಳಲ್ಲಿ ನಕ್ಷತ್ರಾಕಾರದ ತೆಳುಗಂಬಗಳು, ಸರಳವಾದ ಪಟ್ಟಿಕೆಗಳೂ ಲಲಾಟಬಿಂಬದಲ್ಲಿ ಯಾವುದೇ ಮೂರ್ತಿ ಇಲ್ಲದೆ ತೋರಣ ಭಾಗದಲ್ಲಿ ಕಮಲದ ಮೊಗ್ಗುಗಳನ್ನು ಬಿಡಿಸಲಾಗಿದೆ. ಮೇಲಿನ ಪಟ್ಟಿಕೆಯಲ್ಲಿ ದಂತದ ಕೆತ್ತನೆ ಅದರ ಮೇಲ್ಭಾಗದಲ್ಲಿ ಗೋಪುರವುಳ್ಳ ಚಿಕ್ಕ-ಚಿಕ್ಕ ಶಿಖರಗಳು ಇರಿಸಲಾಗಿದೆ. ಗೋಡೆಗೆ ಹೊಂದಿಕೊಂಡಂತೆ ನಕ್ಷತ್ರಾಕಾರದ ಕಂಬಗಳನ್ನು ಕಾಣಬಹುದಾಗಿದೆ.

**ಸುಖನಾಸಿ:** ಸುಖನಾಸಿಯು ಗರ್ಭಗೃಹದಷ್ಟೆ ಉದ್ದಗಲವನ್ನು ಹೊಂದಿದ್ದು ತೆರೆದ ಸುಖನಾಸಿಯಾಗಿದೆ. ಇದರಲ್ಲಿ ಯಾವುದೇ ದೇವಮೂರ್ತಿ ಕಾಣಬರುವುದಿಲ್ಲ. ಇದರ ಮಧ್ಯದಲ್ಲಿ ಪಾಣಿಪೀಠದ ಮೇಲೆ ಸುಮಾರು ಎರಡೂವರೆ ಅಡಿ ಎತ್ತರವಿರುವ ಏಕಶಿಲೆಯ ಅಲಂಕರಣ ನಂದಿಯನ್ನು ಶಿವನಿಗೆ ಎದುರಾಗಿರುವಂತೆ ಪ್ರತಿಷ್ಠಾಪನೆ ಮಾಡಲಾಗಿದೆ. ಈ ನಂದಿಯ ಕೊರಳಲ್ಲಿ ಗಂಟಾಹಾರ, ಕಾಲಲ್ಲಿ ಗೆಜ್ಜೆ, ಬೆನ್ನಲ್ಲಿ ಪುಷ್ಪಗಳ ಹಾರಗಳನ್ನು ಕೆತ್ತಲಾಗಿದೆ. ಗೋಡೆಯ ಅಂಚಿನಲ್ಲಿ ನಕ್ಷತ್ರಾಕಾರದ ಕಂಬಗಳನ್ನು ಇರಿಸಲಾಗಿದೆ.

**ನವರಂಗ:** ನವರಂಗವು 25ಥ25 ಅಡಿ ಉದ್ದಗಲವನ್ನು ಹೊಂದಿ ಚೌಕಾಕಾರವಾಗಿದೆ. ವಿಶಾಲವಾಗಿರುವ ಈ ನವಂಗದ ಮಧ್ಯದಲ್ಲಿ ಸೋಪುಗಲ್ಲಿನಲ್ಲಿ ತಯಾರು ಮಾಡಿ ನಿಲ್ಲಿಸಲಾಘಿರುವ ಹೊಯ್ಸಳ ಶೈಲಿಯ ನಾಲ್ಕು ಕಂಬಗಳಿವೆ. ನಯವಾದ ಕೆತ್ತನೆಯಿಂದ ಕೂಡಿರುವ ಈ ಕಂಬಗಳು ಚೌಕ ಬಳೆಗಳು, ಗಂಟಾಕಾರ, ಘಟ, ಗಾಲಿ, ಚೌಕಾಕಾರವಾದ ಬೋಧಿಗೆ, ಫಲಕ ಮತ್ತು ಕಪೋತವನ್ನು ಹೊಂದಿದೆ. ನವರಂಗದ ಮೇಲ್ಛಾವಣಿಯಲ್ಲಿ 9 ಅಂಕಣಗಳಾಗಿ ವಿಭಾಗಿಸಿ ಒಂದೊಂದು ಅಂಕಣದಲ್ಲಿಯೂ ಒಂದೊಂದು ಭುವನೇಶ್ವರಿಗಳನ್ನು ಇರಿಸಲಾಗಿದೆ. ನವರಂಗದ ಮಧ್ಯದ ಭುವನೇಶ್ವರಿಯೂ ವಿಶಾಲವಾಗಿರುವ ಎರಡು ಅಡಿ ಆಳವಾಗಿ ಒಳಸರಿದಂತೆ ಚೌಕಾಕಾರವಾಗಿದೆ. ಮಧ್ಯದಲ್ಲಿ ಕಮಲದ ಪುಷ್ಪವನ್ನು ಬಿಡಿಸಲಾಗಿದೆ. ಇದರ ಮಧ್ಯದ ಮೊಗ್ಗು ಧೃಡವಾಗಿದ್ದು ಮೊಗ್ಗು ಅರಳುತ್ತಿರುವಂತೆ ಸುತ್ತಲೂ ಗೆರೆಗಳ ರೀತಿ ಮಾಡಿ ತುದಿಯ ಭಾಗವನ್ನು ಸಮವಾಗಿ ಕತ್ತರಿಸಲಾಗಿದೆ. ಉತ್ತರದ ಭುವನೇಶ್ವರಿಯು ಎರಡು ಅಡಿ ಆಳವಾಗಿದ್ದು ಚೌಕಾಕಾರವಾಗಿದೆ. ಇದರಲ್ಲಿ ಬಿಡಿಸಲಾಗಿರುವ ಕಮಲದ ಪುಷ್ಪದ ದಳವು ವೃತ್ತಾಕಾರವಾಗಿದೆ. ದಳಗಳ ನಡುವೆ ಕಮಲದ ಮೊಗ್ಗು ದೃಢವಾಗಿದ್ದು ಅರಳುತ್ತಿರುವಂತೆ ಬಿಡಿಸಲಾಗಿದೆ. ನಾಲ್ಕು ಮೂಲೆಗಲಲ್ಲಿ ವಜ್ರಾಕೃತಿಯ ಪುಷ್ಪವೂ ಅರಳುತ್ತಿರುವಂತೆ ಅಲಂಕರಿಸಲಾಗಿದೆ. ಈಶಾನ್ಯ ಮೂಲೆಯ ಭುವನೇಶ್ವರಿಯು ಎರಡು ಅಡಿ ಆಳವಾಗಿದ್ದು ಮಧ್ಯದಲ್ಲಿ ಅರಳಿದ ಕಮಲದ ಪುಷ್ಪವನ್ನು ಬಿಡಿಸಲಾಗಿದೆ. ಕಮಲದ ಮೊಗ್ಗು ಸುಂದರವಾಗಿದ್ದು ನಯವಾಗಿದೆ. ಕಮಲದ ಪುಷ್ಪವೂ ಹಂತ ಹಂತವಾಗಿಕಮಲದ ಮೊಗ್ಗಿನಿಂದ ದಳಗಳು ಅರಳುತ್ತಿರುವಂತೆ ಎರಡು ಸುತ್ತ ದಳಗಳನ್ನು ಹಾಗೂ ಮಧ್ಯದಲ್ಲಿ ಮೊಗ್ಗು ದೃಢವಾಗಿದ್ದು ಅರಳುತ್ತಿರುವಂತೆ ಬಿಡಿಸಲಾಗಿದೆ. ಇದರ ನವರಂಗ ಒಳಗೋಡೆಯು ಇತ್ತೀಚೆಗೆ ಕಲ್ಲು ಗಾರೆಯಿಂದ ನಿರ್ಮಾಣಗೊಂಡು ನಕ್ಷತ್ರಾಕಾರದ 12 ಕಂಬಗಳು ಗೋಡೆಗೆ ಹೊಂದಿಕೊಂಡಿದೆ. ನವರಂಗ ಒಳಭಾಗದ ಉತ್ತರಭಾಗದಲ್ಲಿ ಸುಮಾರು ಒಂದೂವರೆ ಅಡಿ ಎತ್ತರ ಪೀಠದ ಮೇಲೆ ಸುಮಾರು 3 ಅಡಿ ಎತ್ತರದ ವಿಗ್ರಹವಿದ್ದು ಅದು ವೀರಶೈವ ಸ್ವಾಮಿಯು ಕುಳಿತ್ತಿರುವ ಭಂಗಿಯ ವಿಗ್ರಹವಿರುವುದು ಕಂಡುಬಂದು ಅದು ಯೋಗಮುದ್ರೆಯಲ್ಲಿದೆ. ಇದರ ಎರಡೂ ಭಾಗದಲ್ಲಿ ಹೆಣ್ಣು ಮತ್ತು ಗಂಡಸಿ ಯೋಗಿಗಿಳು ಕುಳಿತ್ತಿರುವ ಭಂಗಿಗಳು ಕಾಣಸಿಗುತ್ತವೆ. ಪ್ರಭಾವಳಿಯಲ್ಲಿ ಶೃಂಗಿಯು ನೃತ್ಯದಲ್ಲಿ ತೊಡಗಿದ್ದು ತಾಂಡವೇಶ್ವರ ಮೇಲ್ಭಾಗದಲ್ಲಿದ್ದು ಕೆಳಭಾಗದಲ್ಲಿ ನಂದಿಯನ್ನು ಕಾಣಬಹುದು. ಬಲಭಾಗದಲ್ಲಿ ವೀರಭದ್ರನು ಎರಡು ಕೈಗಳನ್ನು ಹೊಂದಿರುವ ದೇವತೆಗಳು ಕಂಡುಬಂದಿದ್ದು ಎಡಭಾಗದಲ್ಲಿ ನಾಲ್ಕು ಕೈಯುಳ್ಳ ಸೋಮನು ಗೂಳಿಯ ಮೇಲೆ ಕುಳಿತ್ತಿರುವಂತೆ ಬಿಡಿಸಲಾಗಿದೆ. ಈ ವಿಗ್ರಹದ ಮೇಲ್ಭಾಗದ ತುದಿಯಲ್ಲಿ ವೃತ್ತಾಕಾರವಾಗಿ ಹೊಯ್ಸಳರಿಂದ ರಚಿಸಲ್ಪಟ್ಟ ಶಿಲಾಶಾಸನವು ಕಂಡುಬಂದಿದೆ. ನವರಂಗ ಬಾಗಿಲು ಸರಳವಾಗಿದ್ದು ಮೂರು ಪಟ್ಟಿಕೆಗಳಿಂದ ಕೂಡಿದ್ದು ಇಕ್ಕೆಲಗಳಲ್ಲಿ ಯಾವುದೇ ರೀತಿಯ ಅಲಂಕರಣ ಕಂಡುಬರುವುದಿಲ್ಲ. ಮೇಲೆ ಸರಿದಂತೆ ನಕ್ಷತ್ರಾಕಾರದ ಅರೆಗಂಭಗಳಿದ್ದು ಲಲಾಟಬಿಂಬದಲ್ಲಿ ಯಾವುದೇ ಕೆತ್ತನೆ ಮಾಡದೆ ಹಾಗೆ ಬಿಡಲಾಗಿದೆ. ಬಾಗಿಲ ತೋರಣದಲ್ಲಿ ಕಮಲದ ಮೊಗ್ಗುಗಳೂ ಅಪೂರ್ಣವಾಗಿದ್ದು ಮೇಲ್ಭಾಗದ ಪಟ್ಟಿಕೆ ಅಲಂಕರಣ ಇಲ್ಲದೆ ಅಪೂರ್ಣವಾಗಿ ಕಾಣಬಹುದಾಗಿದೆ. ಗೋಡೆಗೆ ಹೊಂದಿಕೊಂಡಂತೆ ನಕ್ಷತ್ರಾಕಾರದ ಎರಡು ಕಂಬಗಳನ್ನು ಕಾಣಬಹುದು.

**ಮುಖಮಂಟಪ:** ನವರಂಗದ ಮುಂದಿರುವ ಮುಖಮಂಟಪವು 10x20 ಅಡಿ ಉದ್ದಗಲವನ್ನು ಹೊಂದಿದ್ದು ಎರಡು ಹೊಯ್ಸಳ ಶೈಲಿಯ ಕಂಬಗಳಿವೆ. ಈ ಕಂಬಗಳ ಪೀಠ ಚೌಕಾಕಾರ ಅಷ್ಟಮುಖಗಳನ್ನು ಹೊಂದಿದ್ದು ಸಿಲಿಂಡರಿನಾಕಾರವಾಗಿ ಘಂಟಾ, ಗಾಲಿ, ಬೋಧಿಗೆ ಸರಳವಾಗಿದ್ದು ಕಪೋತವು ಎರಡು ದಿಕ್ಕಿಗೂ ಚಾಚಿಕೊಂಡಿರುವಂತೆ ನಿಲ್ಲಿಸಲಾಗಿದೆ ಹಾಗೂ ಮೇಲ್ಛಾವಣಿಯ ಅಡ್ಡಪಟ್ಟಿಗೆ ಆಶ್ರಯವಾಗಿ ನಿಂತಿದೆ. ಮೇಲ್ಛಾವಣಿಯಲ್ಲಿ ಯಾವುದೇ ರೀತಿಯ ಭುವನೇಶ್ವರಿ ಕಂಡುಬರುವುದಿಲ್ಲ. ಮುಂಭಾಗದಲ್ಲಿ ನಾಲ್ಕು ಹಂತದ ಸೋಪಾನ ಕಂಡುಬಂದಿದೆ.

**ಅಧಿಷ್ಠಾನ:** ಅಧಿಷ್ಠಾನವು ಸುಮಾರು ನಾಲ್ಕು ಅಡಿ ಎತ್ತರವಾಗಿ ಐದು ಪಟ್ಟಿಕೆಗಳನ್ನು ಒಳಗೊಂಡಿದೆ. ಇವು ನಯವಾದ ಕೆತ್ತನೆಯಿಂದ ಕೂಡಿದ್ದು ಇನ್ನರಿತ ಮತ್ತು ಮುನ್ನರಿತಗಳಂತೆ ಕ್ರಮವಾಗಿ ಜೋಡಿಸಲಾಗಿದೆ. ಈ ಅಧಿಷ್ಠಾನ ಎರಡು ಮೂರು, ನಾಲ್ಕನೇ ಪಟ್ಟಿಕೆಯಲ್ಲಿ ದಂತ ಮಾದರಿಯ ಕೆತ್ತನೆಗಳನ್ನು ಕಾಣಬಹುದಾಗಿದೆ ಹಾಗೂ ಐದನೇ ಪಟ್ಟಿಕೆಯಲ್ಲಿ ಪ್ಲಸ್ + ಆಕಾರದ ಚಿಹ್ನೆಯನ್ನು ಕಾಣಬಹುದಾಗಿದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಉತ್ತರಭಾಗದಲ್ಲಿ ದುಸ್ಥಿತಿಯಾಗಿರುವ ಮಕರ ಶೈಲಿಯ ಪ್ರನಾಳ ಕಾಣಬರುತ್ತದೆ.

**ಭಿತ್ತಿ:** ಅಧಿಷ್ಠಾನದ ಮೇಲೆ ನಿರ್ಮಿಸಲಾಗಿರುವ ಭಿತ್ತಿಯು ಸರಳವಾಗಿದ್ದು ಇನ್ನರಿತ ಮತ್ತು ಮುನ್ನರಿತದಿಂದ ನಿರ್ಮಾಣಗೊಂಡಿದೆ. ಅಧಿಷ್ಠಾನ ಮತ್ತು ಭಿತ್ತಿಯ ಭಾಗವು ಗರ್ಭಗೃಹ, ಸುಖನಾಸಿಯೂ ಮೂಲ ಸ್ವರೂಪದಲ್ಲಿದ್ದು ನವರಂಗದ ಭಾಗವನ್ನು ಇತ್ತೀಚೆಗೆ ಪುರಾತತ್ವ ಇಲಾಖೆಯವರು ಕಲ್ಲಿನ ಕಂಬಗಳನ್ನು ನಿಲ್ಲಿಸಿ ಮೂಲಸ್ವರೂಪದಂತೆ ಕ್ರಮವಾಗಿ ಜೋಡಣೆ ಮಾಡಿದ್ದಾರೆ. ಭಿತ್ತಿಯಲ್ಲಿ ಅರೆಗಂಬಗಳಿದ್ದು ಅವುಗಳಲ್ಲಿ ಘಂಟಾ, ನಕ್ಷತ್ರಾಕಾರದ ಗಾಲಿ, ನಕ್ಷತ್ರಾಕಾರದ ಬೋದಿಗೆ ಭಿತ್ತಿಯ ಮೇಲಿರುವ ಕಪೋತವನ್ನು ಇತ್ತೀಚೆಗೆ ಇಳಿಜಾರಾಗಿರುವಂತೆ ಕಲ್ಲಿನಲ್ಲಿ ಮಾಡಲಾಗಿದೆ. ಕಪೋತದ ಅಂಚಿನಲ್ಲಿ ದಂತಮಾದರಿಯ

ಕೆತ್ತನೆಯನ್ನು ಕಾಣಬಹುದಾಗಿದೆ. ಸುಖನಾಸಿಯ ಹೊರಭಾಗದಲ್ಲಿ ನಕ್ಷತ್ರಾಕಾರದ ಕಂಬಗಳನ್ನು ಕಾಣಬಹುದಾಗಿದೆ.

**ಶಿಖರ:** ಗರ್ಭಗೃಹದ ಮೇಲಿದ್ದ ಶಿಖರವು ಪ್ರಕೃತಿ ವಿಕೋಪಕ್ಕೆ ತುತ್ತಾಗಿ ಅರ್ಧಭಾಗವೂ ಬಿದ್ದು ಹೋಗಿದೆ. ಎರಡು ಹಂತವು ಸುಸ್ಥಿತಿಯಲ್ಲಿದ್ದು ಮೊದಲನೇ ಹಂತದಲ್ಲಿ ಅಲ್ಲಿ ಪ್ಲಸ್ + ಚಿಹ್ನೆಯು ಕಂಡುಬಂದಿದ್ದು ಸುಖನಾಸಿಯ ಹೊರಭಾಗದ ಎರಡು ಕಡೆಯಲ್ಲಿ ನಕ್ಷತ್ರಾಕಾರದ ಕಂಬಗಳನ್ನು ಕಂಡರಿಸಲಾಗಿದೆ.

**ಅಭ್ಯಸಿಸಿರುವ ಗ್ರಂಥಗಳು**


1. ಹಾಸನ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 1988
2. ಗೋಪಾಲ್ ಆರ್ (ಸಂ): ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2010
3. ಅಪರ್ಣ.ಕೂ.ಸ: ದೇವಾಲಯ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ 1999
4. ಅರವಿಂದ ಮಾಲಗತ್ತಿ (ಪ್ರ.ಸಂ): ಕನ್ನಡ ವಿಷಯ ವಿಶ್ವಕೋಶ– ಸಂಪುಟ 1, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2005
5. ಕೃಷ್ಣರಾವ್ ಎಂ.ವಿ. ಮತ್ತು ಕೇಶವಭಟ್ಟ: ಕರ್ನಾಟಕದ ಇತಿಹಾಸ ದರ್ಶನ, ಪ್ರಕಟಣೆ: ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಚಾಮರಾಜಪೇಟೆ, ಬೆಂಗಳೂರು, 1970
6. ಚಿದಾನಂದಮೂರ್ತಿ ಎಂ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು, 2011
7. ಚಿದಾನಂದಮೂರ್ತಿ ಎಂ: ಕರ್ನಾಟಕ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
8. ಜವರೇಗೌಡ. ದೇ: ಸ್ಥಳನಾಮ ವ್ಯಾಸಂಗ, ಸಹ್ಯಾದ್ರಿ ಪ್ರಕಾಶನ ಮೈಸೂರು, 1990.